September 11, 2025

# ಎಸಿಎಂ ಸೊಸೈಟಿಯ ವಿದ್ಯಾರ್ಥಿ ಘಟಕ ಉದ್ಘಾಟನೆ




**»ಜನಮಾಧ್ಯಮ, ಹಳಿಯಾಳ:** ವಿಶ್ವದ ಅತೀ ದೊಡ್ಡ ವೈಜ್ಞಾನಿಕ ಹಾಗೂ ಶೈಕ್ಷಣಿಕ ಸೊಸೈಟಿಯಾದ ಅಸೋಸಿಯೇಷನ್ ಫಾರ್ ಕಂಪ್ಯೂಟರ್ ಮಶಿನರಿ (ಎ ಸಿ ಎಂ ) ನ ವಿದ್ಯಾರ್ಥಿ ಘಟಕ ವನ್ನು ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಸೆ.9ರಂದು ಉದ್ಘಾಟಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಳಗಾವಿಯ ಥೀಟಾ ಡೈನಮಿಕ್ ಪ್ರೈ. ಲಿ ಯ ನಿರ್ದೇಶಕ ಹಾಗೂ ಉಪಸಂಸ್ಥಾಪಕ ಗಜೇಂದ್ರ ದೇಶಪಾಂಡೆ ಆಗಮಿಸಿ ವಿದ್ಯಾರ್ಥಿಗಳು ಎ ಸಿ ಎಂ ಸೊಸೈಟಿಯ ಸದಸ್ಯತ್ವ ಹೊಂದಿದಲ್ಲಿ ಅದರಿಂದಾಗುವ ಉಪಯೋಗವನ್ನು ತಿಳಿಸಿದರು. ಎಸಿಎಂನ ಸದಸ್ಯತ್ವ ಹೊಂದಿದ್ದಲ್ಲಿ ಅನಿಯಮಿತವಾಗಿ ಡಿಜಿಟಲ್ ಲೈಬ್ರರಿಯ ಪ್ರಯೋಜನವನ್ನು ಪಡೆಯಬಹುದು ಅಲ್ಲದೆ ಖ್ಯಾತ ವಿಜ್ಞಾನಿಗಳು ಹಾಗೂ ತಂತ್ರಜ್ಞರ ಜೊತೆಗೆ ಸಂವಾದಿಸಲು ಅವಕಾಶವಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಎ ಸಿ ಎಂ ಸದಸ್ಯತ್ವವನ್ನು ಹೊಂದಿ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಹೇಳಿದರು.

ಕಂಪ್ಯೂಟರ್ ಸೈನ್ಸ್ (ಎಐ ಆ್ಯಂಡ್ ಎಂ ಎಲ್ ) ಮುಖ್ಯಸ್ಥೆ ಡಾ. ಪೂರ್ಣಿಮ ರಾಯ್ಕರ್ ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ವಂದಿಸಿದರು. ಪ್ರೊ. ನರಸಿಂಹ ದೀಕ್ಷಿತ್ ನಿರೂಪಿಸಿದರು. ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಸೈನ್ಸ್ (ಎಐ ಆ್ಯಂಡ್ ಎಂಎಲ್) ವಿಭಾಗದ ಜಂಟಿ ಆಯೋಗದಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಎಸಿಎಂ ಸೊಸೈಟಿಯ ವಿದ್ಯಾರ್ಥಿ ಘಟಕ ಉದ್ಘಾಟನೆ




ಹಳಿಯಾಳ: ವಿಶ್ವದ ಅತೀ ದೊಡ್ಡ ವೈಜ್ಞಾನಿಕ ಹಾಗೂ ಶೈಕ್ಷಣಿಕ ಸೊಸೈಟಿಯಾದ ಅಸೋಸಿಯೇಷನ್ ಫಾರ್ ಕಂಪ್ಯೂಟರ್ ಮಶಿನರಿ (ಎ ಸಿ ಎಂ ) ನ ವಿದ್ಯಾರ್ಥಿ ಘಟಕ ವನ್ನು ಪಟ್ಟಣದ ಕೆ ಎಲ್ ಎಸ್ ವಿ ಡಿ ಐ ಟಿ ಮಹಾವಿದ್ಯಾಲಯದಲ್ಲಿ ಸಪ್ಟೆಂಬರ್ 9ರಂದು ಉದ್ಘಾಟಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಳಗಾವಿಯ ಥೀಟಾ ಡೈನಮಿಕ್ ಪ್ರೈ. ಲಿ ಯ ನಿರ್ದೇಶಕ ಹಾಗೂ ಉಪಸಂಸ್ಥಾಪಕರಾದ ಗಜೇಂದ್ರ ದೇಶಪಾಂಡೆ ಆಗಮಿಸಿ ವಿದ್ಯಾರ್ಥಿಗಳು ಎ ಸಿ ಎಂ ಸೊಸೈಟಿಯ ಸದಸ್ಯತ್ವ ಹೊಂದಿದಲ್ಲಿ ಅದರಿಂದಾಗುವ ಉಪಯೋಗವನ್ನು ತಿಳಿಸಿದರು.

ಎ ಸಿ ಎಂ ನ ಸದಸ್ಯತ್ವ ಹೊಂದಿದ್ದಲ್ಲಿ ಅನಿಯಮಿತವಾಗಿ ಡಿಜಿಟಲ್ ಲೈಬ್ರರಿಯ ಪ್ರಯೋಜನವನ್ನು ಪಡೆಯಬಹುದು ಅಲ್ಲದೆ ಖ್ಯಾತ ವಿಜ್ಞಾನಿಗಳು ಹಾಗೂ ತಂತ್ರಜ್ಞರ ಜೊತೆಗೆ ಸಂವಾದಿಸಲು ಅವಕಾಶವಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಎ ಸಿ ಎಂ ಸದಸ್ಯತ್ವವನ್ನು ಹೊಂದಿ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಹೇಳಿದರು.

ಕಂಪ್ಯೂಟರ್ ಸೈನ್ಸ್ (ಎ ಐ ಆಂಡ್ ಎಂ ಎಲ್ ) ಮುಖ್ಯಸ್ಥೆ ಡಾ. ಪೂರ್ಣಿಮ ರಾಯ್ಕರ್ ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ವಂದಿಸಿದರು. ಪ್ರೊ. ನರಸಿಂಹ ದೀಕ್ಷಿತ್ ನಿರೂಪಿಸಿದರು. ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಸೈನ್ಸ್ (ಎ ಐ ಆಂಡ್ ಎಂ ಎಲ್ ) ವಿಭಾಗದ ಜಂಟಿ ಆಯೋಗದಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


Powered By KHUSHIHOST ® | License - ePaperCloud.com